(ಶ್ರೀ ಜಿ. ಪುಟ್ಟಸ್ವಾಮಿ.)

ಆಗದೆ ತೊಂದರೆಯಾಗಿದೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಅದು malnad communications ನಂಬಂಧವಾಗಿ ಅಲ್ಲ. ರಸ್ತೆ ಗಳಿಗೆ ನಂಬಂಧ ಪಟ್ಟಂತೆ ಬಡ್ಜೆಟ್ ಗ್ರಾಂಟ್‌ಗಿಂತ ಸ್ವಲ್ಪ ಜಾಸ್ತಿ ಖರ್ಚಾಗಿತ್ತು. ಈಗ ಅದಕ್ಕೆ ಸ್ಯಾಂಕ್ಷ್ಷ್ ಮಾಡಿದ್ದೇವೆ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಈ ಐದು ಲಕ್ಷ ರೂಪಾಯಿಗಳ ಪೈಕಿ 2 ಲಕ್ಷ ರೂಪಾಯಿಗಳು ಯಾವ ಯಾವ ಕೆಲಸಗಳಿಗಾಗಿ ಖರ್ಚಾಗಿವೆ ಎಂಬುದನ್ನು ಹೇಳಬಲ್ಲರಾ ?

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕೆಲ್ಲಾ ಒಂದು ಪ್ರೊಗ್ರಾಂ ಇದೆ, ಅದರ ಪ್ರಕಾರ ತಮ್ಮ ಜಿಲ್ಲೆಯಲ್ಲೂ ಕೂಡ ವರ್ಕ್ಸ್ ತೆಗೆದುಕೊಂಡಿದ್ದಾರೆ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಸೇತುವೆಗಳು ಇಲ್ಲದೇ ಇರುವಕಡೆ, ಅವಶ್ಯಕವಾಗಿ ಸೇತುವೆಗಳನ್ನು ಕಟ್ಟುವುದಕ್ಕಾಗಿ ಈ ದುಡ್ಡನ್ನು ಖರ್ಚುಮಾಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಸೇತುವೆಗಳು ಮತ್ತು ರಸ್ತೆ ಕೆಲಸಗಳನ್ನು ಮಾಡಬೇಕೆಂಬುದೇ ಉದ್ದೇಶ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಈ ಕಾಂಗಾರಿ ಗಳ ಕೆಲಸ ನಡೆಯುತ್ತಾ ಇಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಮಳೆಗಾಲದಲ್ಲಿ ಸ್ವಲ್ಪ ಭಾಗ ಕೆಲಸ ಮಾಡಲಕ್ಕೆ ಆಗಲಿಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ತಾಲ್ಲೂಕುವಾರು ಎಷ್ಟು ಕೆಲಸ ಆಗಿದೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ತಾಲ್ಲೂಕುವಾರು figures ಇಲ್ಲ.

ಶ್ರೀ ಎಸ್. ಗೋಪಾಲಗೌಡ.—ಗ್ರಾಂಟುಗಳು ಲ್ಯಾಪ್ಸ್ ಆಗದಿರುವ ರೀತಿಯಲ್ಲಿ ಮಳೆಗಾಲ ನಿಂತ ತಕ್ಷಣ ಅಥವಾ ಪ್ರಾರಂಭವಾಗುವುದಕ್ಕೆ ಮುಂಚೆ ಕೆಲಸ ಪ್ರಾರಂಭಿಸುವಂತೆ ಅಧಿಕಾರಿಗಳಿಗೆ ಹುಕುಂ ಕೊಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಹೋದ ಸಲ 5 ಲಕ್ಷ ರೂಪಾಯಿ ಒದಗಿಸಲಾಯಿತು, ಅನಂತರ ಮಳೆಗಾಲ ಬಂತು. ಆದಷ್ಟು ಜಾಗ್ರತೆ ಕೆಲಸ ಮಾಡಬೇಕೆಂದು ಹುಕುಂ ಮಾಡಲಾಗಿದೆ.

ಶ್ರೀ ಎಸ್. ಗೋಪಾಲಗೌಡ.—ಕೆಲಸ ಸಕಾಲದಲ್ಲಿ ಪ್ರಾರಂಭ ಮಾಡದಿರಲು ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ನನಗೆ ಗೊತ್ತಿರುವ ಹಾಗೆ ಎಸ್ಟಿಮೇಟ್ ಆಗಬೇಕು, ಅದು ಮಂಜೂರಾಗ ಬೇಕು, ಟೆಂಡರ್ ಕಾಲ್‌ಫಾರ್ ಮಾಡಬೇಕು, ಇಂಥ ತೊಂದರೆಗಳೆಲ್ಲಾ ಇವೆ.

ಶ್ರೀ ಎಸ್. ಗೋಪಾಲಗೌಡ.—ಮೊದಲೇ ಮಂಜೂ ರಾಗಿರುವುದನ್ನು ಮತ್ತು ಕೆಲಸ ಪ್ರಾರಂಭ ಮಾಡ ಬಹುದೆಂದು ಹೇಳಿ ಒಪ್ಪಿಕೊಂಡಿರುವ ಕಾಂಗಾರಿ ಗಳನ್ನು ಕೂಡ ಸಕಾಲದಲ್ಲಿ ಪ್ರಾರಂಭ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ತಮ್ಮ ಮನಸ್ಸಿರು ವುದು ಗೊತ್ತಾಗಲಿಲ್ಲ. ಸಣ್ಣಸಣ್ಣ ರಸ್ತೆ, ಸೇತುವೆ ಗಳಿಗೆ ಖರ್ಚು ಮಾಡಬೇಕೆಂದು ಈ ಹಣ ವಿನಿಯೋಗವಾಗಿದೆ.

romoting Non-graduate Officials to First Division Cadre.

Q.—915. **Sri S. R. NAGAPPA SETTY** (Shimoga).—Will the Government be pleased to state :—

(*a*) when the order for promoting non-graduate Government officials to the First Division cadre was passed and when it came into effect ?

(*b*) whether it is given effect to in all the departments ;

(*c*) whether they have received any representations in this connection from any teachers' associations in the State to give effect as per Government Order?

A.—**Sri Kadidal MANJAPPA** (Minister for Revenue and Public Works).—

(*a*) On 28th November 1921, *vide* Government Order No. E.A. 2093-172-E.A.G. 14-21-7, dated 28th November 1921.

(*b*) Yes, in the case of officials in ministerial services only. This is not applied in the case of non-graduate teachers in tutorial line.

(*c*) Yes. The matter is under examination.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಉಪಾಧ್ಯಾಯ ರಿಗೆ ಮಾತ್ರ ಏಕೆ ಈ ವ್ಯತ್ಯಾಸ ಮಾಡಿರುವುದು ?

Sri Kadidal MANJAPPA.—The matter is under examination.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಇದು 1921 ರಿಂದಲೂ ಪರಿಶೀಲನೆಯಲ್ಲದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ, ಈಗಿನ ವಿಚಾರ ಹೇಳಿರುವುದು.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—1947 ರಿಂದ ಪರಿಶೀಲನೆಯಲ್ಲದೆಯೆ ಎಂದು ನಾನು ಕೇಳುವುದು.

ಶ್ರೀ ಕಡಿದಾಳ್ ಮಂಜಪ್ಪ.—ಇದಕ್ಕೆ ನೋಟೀಸ್ ಬೇಕು.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಮನವಿ ಬಂದಮೇಲೆ ಪರಿಶೀಲಿಸುತ್ತಿದ್ದೀರೋ ಅಥವಾ ಅದಕ್ಕೆ ಮುಂಚಿನಿಂದಲೂ ಪರಿಶೀಲನೆ ಮಾಡುತ್ತಿರುವಿರೋ ?

ಶ್ರೀ ಕಡಿದಾಳ್ ಮಂಜಪ್ಪ.—ಇತ್ತೀಚೆಗೆ ಪರಿ ಶೀಲನೆಯಾಗುತ್ತಿದೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಡಿ. ಇ. ಓ. ಆಫೀಸಿನ ಗುಮಾಸ್ತೆರಿಗಿರುವ ಸ್ಕೇಲನ್ನು ಇತರ ಉಪಾಧ್ಯಾಯರಿಗೆ ಕೊಡದಿರುವುದಕ್ಕೆ ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಪರಿಶೀಲನೆ ಯಲ್ಲದೆಯೆಂದು ಜವಾಬು ಹೇಳಿದೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ನಾರ್ಮ್ ಗ್ರ್ಯಾಜು ಯೇಟ್ ಉಪಾಧ್ಯಾಯರು. ಈಗ ಎಷ್ಟು ಜನರಿದ್ದಾರೆ ?

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕೆ ನೋಟೀಸ್ ಬೇಕು.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಈ ರೀತಿಯಾಗಿ ತಾರತಮ್ಯ ಮಾಡಿರುವುದಕ್ಕೆ ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—1921ರಲ್ಲಿ ಮಿನಿಸ್ಟೀರಿ ಯಲ್ ಸರ್ವಿಸ್‌ಗೆ ಅನ್ವಯಿಸಬೇಕೆಂದು ಹೇಳಿ ಅಲ್ಲಿಂದ ಹಾಗೆಯೇ ಅದು ನಡೆದು ಬಂದಿದೆ. ಇದನ್ನು ಪರಿಶೀಲಿ ಸುತ್ತಿದ್ದೇವೆ.
